**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 1910/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - ಸಂತೋಷ್ ಕುಮಾರ್ ವಿ ಆರ್ | **ಚಾ.ಸಾ.-2** |
| **ತಂದೆ ಹೆಸರು** | - ರಾಜು ವಿ | **ಫ್ರಾ.ಸಾ.-3** |
| **ವಯಸ್ಸು** | - 36 ವರ್ಷ | |
| **ಉದ್ಯೋಗ** | - ವ್ಯವಸಾಯ | |
| **ವಾಸಸ್ಥಳಃ** | - ಮದ್ದೂರು | |

ದಿನಾಂಕಃ 31.12.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ನನಗೆ ಚಾ.ಸಾ. 1 ಮತ್ತು 3 ರವರ ಪರಿಚಯವಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಸದರೀ ದಾಖಲೆ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿ.ಪಿ. 2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 2 ಬಿ ಎಂದು ಗುರುತಿಸಲಾಯಿತು.

**(**ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು.**)**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದ**

ನೀವು ಮದ್ದೂರು ಟೌನಿನ ಐ ಐ ಎಫ್ ಎಲ್ ಗೋಲ್ಡ್ ಫೈನಾನ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೀರಿ ಎಂದರೆ ಸರಿ. ಆಗ ನಿಮಗೆ ಶಿವಕುಮಾರ್ ಎಂಬುವವರು ಪರಿಚಯವಿರುತ್ತಾರೆಂದರೆ ಸರಿಯಲ್ಲ. ಅವರು ಕಷ್ಟಕಾಲದಲ್ಲಿ ನಿಮಗೆ ಚಿನ್ನದ ಒಡವೆಗಳನ್ನು ನೀಡುತ್ತಿದ್ದರು, ಆಗ ನೀವು ಹಣವನ್ನು ನೀಡುತ್ತಿದ್ದಿರಿ ಎಂದರೆ ಸರಿಯಲ್ಲ. ದಿನಾಂಕಃ 16.03.2020 ರಂದು ನಿಮಗೆ ಹಣದ ಅಭಾವ ಇದ್ದುದರಿಂದ 70.3 ಗ್ರಾಂ ತೂಕದ ಎರಡು ಚಿನ್ನದ ನೆಕ್ಲೆಸ್ ನ್ನು ಶಿವಕುಮಾರ್ ರವರ ಬಳಿ ನೀಡಿದ್ದು, ಆಗ ಅವರು ಸದರೀ ಒಡವೆಯನ್ನು ನಿಮ್ಮ ಹೆಸರಿನಲ್ಲಿ ಗಿರವಿ ಇಡುವುದು ಸರಿಯಲ್ಲ ಬದಲಿಗೆ ಇಂದು ಕುಮಾರ್ ರವರ ಹೆಸರಿನಲ್ಲಿ ಇಡುವುದು ಸೂಕ್ತವೆಂದು ತಿಳಿಸಿರುತ್ತಾರೆಂದರೆ ಸರಿಯಲ್ಲ. ಸದರೀ ಒಡವೆಗೆ ರೂ.

2,47,038/- ಗಳನ್ನು ಅವರು ನೀಡಿರುತ್ತಾರೆಂದರೆ ಸರಿಯಲ್ಲ. ಆಗ ಇಂದುಕುಮಾರ್ ರವರು ಒಂದು ಬಿಲ್ಲೆ ಯನ್ನು ತಂದು ತೋರಿಸುತ್ತಾರೆ. ಆ ಬಿಲ್ಲೆ ನಂಬರ್ ಜಿ ಆರ್ 14056241 ಆಗಿದ್ದು, ಅದನ್ನು ತೋರಿಸಿದಾಗ, ಇಂದುಕುಮಾರ್ ರವರಿಗೆ ನೀಡುವುದಾಗಿ ಶಿವಕುಮಾರ್ ನಿಮಗೆ ತಿಳಿಸಿರುತ್ತಾರೆಂದರೆ ಸರಿಯಲ್ಲ. ಶಿವಕುಮಾರ್ ರವರು ಐಐಎಫ್ ಎಸ್ ಎಲ್ ಕಂಪನಿಗೆ ವಂಚನೆ ಮಾಡಿ, ದಿನಾಂಕಃ 05.06.2021 ರಂದು, ಓಡಿಹೋಗಿರುತ್ತಾರೆಂದು ನಿಮಗೆ ಗೊತ್ತಾಯಿತೆಂದರೆ ಸರಿಯಲ್ಲ. ಈ ಸಂಬಂಧಪಟ್ಟಂತೆ ಪೋಲೀಸರಿಗೆ ದಿನಾಂಕಃ 06.06.2021 ರಂದು ಪ್ರಕರಣ ದಾಖಲಾಗಿದೆಯೆಂಬ ಮಾಹಿತಿ ನಿಮಗೆ ತಿಳಿದುಬಂತು ಎಂದರೆ ಸರಿಯಲ್ಲ. ಈ ಸಂಬಂಧವಾಗಿ ದಿನಾಂಕಃ 16.07.2021 ರಂದು ಹೇಳಿಕೆಯನ್ನು ನೀಡಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಒಪ್ಪದ ಹೇಳಿಕೆಯನ್ನು ನಿ.ಪಿ. 4 ಎಂದು ಗುರುತಿಸಲಾಯಿತು. ಪುನಃ ಪೋಲೀಸರು ನಿಮ್ಮನ್ನು ಠಾಣೆಗೆ ಕರೆಯಿಸಿ ಶಿವಕುಮಾರ್ ರವರು ನಿಮ್ಮ ಚಿನ್ನದ ಒಡವೆಗಳನ್ನು ಮದ್ದೂರು ಟೌನಿನ ಸುಮತಿ ಜ್ಯುವೆಲರಿ ಅಂಗಡಿಗೆ ಮಾರಾಟ ಮಾಡಿರುವುದಾಗಿ, ತಿಳಿಸಿರುತ್ತಾರೆಂದರೆ ಸರಿಯಲ್ಲ. ನಂತರ ಶಿವಕುಮಾರ್ ರವರು ಪ್ರಕರಣದಲ್ಲಿ ಆರೋಪಿಯಾಗಿದ್ದು ಅವರನ್ನು ಗುರುತಿಸಲು ಪೋಲೀಸರು ನಿಮಗೆ ತಿಳಿಸಿರುತ್ತಾರೆಂದರೆ ಸರಿಯಲ್ಲ. ಈ ಬಗ್ಗೆ ದಿನಾಂಕಃ 31.03.2022 ರಂದು ಪೋಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಒಪ್ಪದ ಹೇಳಿಕೆಯನ್ನು ನಿ.ಪಿ. 5 ಎಂದು ಗುರುತಿಸಲಾಯಿತು. ಚಾ.ಸಾ. 1 ರವರು ತೋರಿಸಿದ ಸ್ಥಳದಲ್ಲಿ ಪೋಲೀಸರು ದಿನಾಂಕಃ 06.06.2022 ರಂದು ಸಂಜೆ 04.30 ರಿಂದ 05.15 ಗಂಟೆ ಯವರೆಗೆ ಮಹಜರ್ ಕ್ರಮವನ್ನು ನಿಮ್ಮ ಮತ್ತು ಚಾ.ಸಾ. 3 ರವರ ಸಮಕ್ಷಮ ಜರುಗಿಸಿರುತ್ತಾರೆಂದರೆ ಸರಿಯಲ್ಲ. ನಿ.ಪಿ. 2, 4 ಮತ್ತು 5 ರ ವಿಚಾರಗಳು ನಿಮಗೆ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ ಏನೂ ಇಲ್ಲ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.